**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 372 /2025**

ಚಾ.ಸಾ-6, ಪ್ರಾ.ಸಾ-01

| | | |
|---|---|---|
| ಹೆಸರು | : | ಕೃಷ್ಣ ಕಾಂತ ಕೋಳಿ |
| ತಂದೆಯ ಹೆಸರು | : | ಹೊನ್ನಜ್ಜ |
| ವಯಸ್ಸು | : | 36 |
| ವೃತ್ತಿ | : | ಪೊಲೀಸ್ ಉಪ ನಿರೀಕ್ಷಕರು |
| ವಾಸ | : | ನಂಜನಗೂಡು ಸಂಚಾರಿ ಪೊಲೀಸು ಠಾಣೆ |

**ದಿನಾಂಕ 18.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದಃ**

18.03.2022 ರಿಂದ 22.07.2022 ರವರೆಗೆ ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆನೆ.

ದಿಃ 14.06.2022 ರಂದು ಬೆಳಗ್ಗೆ 10.30 ಗಂಟೆಗೆ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದ ಆಧಾರದ ಮೇಲೆ ಠಾಣಾ ಮೊ. ಸಂಖ್ಯೆ 208/2022 ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿ, ಅದೇ ದಿನ ತಿ. ನರಸೀಪುರದ ಶ್ರೀ ಚೌಡೇಶ್ವರಿ ದೇವಸ್ಥಾನಕ್ಕೆ ಹೋಗಿ ಚಾಸಾ 2 ಮತ್ತು 3 ರವರನ್ನು ಕರೆಸಿಕೊಂಡು ಚಾಸಾ 1 ತೋರಿಸಿದ ಕಳ್ಳತನವಾದ ದೇವಸ್ಥಾನದ ಸ್ಥಳವನ್ನು ಮಹಜರ್ ಮಾಡಿ,

ಸ್ಥಳದಿಂದ ಕಬ್ಬಿಣದ ಬೀಗದ ಭಾಗ ಮತ್ತು ಬೀಗ ಹಾಗೂ ಒದು ಕಪ್ಪು ಬಣ್ಣದ ಟೋಪಿಯನ್ನು ಜಪ್ತು ಪಡಿಸಿಕೊಂಡೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 14 ರವರಿಗೆ ವಹಿಸಿಕೊಟ್ಟೆ.

ದಿಃ 19.07.2022 ರಂದು ತಿ.ನರಸೀಪುರ ಠಾಣೆಯ ಮೊ.ಸಂಖ್ಯೆ.252/2022 ದಾಖಲಾಗಿದ್ದು, ಅದರ ಆರೋಪಿಯ ಪತ್ತೆಯ ಕರ್ತವ್ಯದಲ್ಲಿದ್ದಾಗ ಮಧ್ಯಹ್ನಾ 11.30 ಗಂಟೆಗೆ ಚಾಸಾ 14 ರವರಿಗೆ ಆರೋಪಿ ಬಗ್ಗೆ ಮಾಹಿತಿ ತಿಳಿಸಿದ್ದು ನಾನು ಮತ್ತು ಚಾಸಾ 14 ಸಿಬ್ಬಂದಿಗಳೊಂದಿಗೆ ಚಾಮರಾಜನಗರದ ಬಿಸಲವಾಡಿಗೆ ಹೋಗಿ ಚರ್ಚ ಬಳಿ ಖಾಲಿ ಜಾಗದಲ್ಲಿ ಸುತ್ತುವರಿದು, ಅಲ್ಲಿದ್ದ 6 ಜನರನ್ನು ಹಿಡಿದು ವಿಚಾರಿಸಲಾಗಿ ಅವರು ತಮ್ಮ ಹೆಸರುಗಳನ್ನು ಕಬ್ಬಾಳ, ಮಂಜುನಾತ, ರಘು, ಕೃಷ್ಣ, ಪಿಚ್ಚಗುನ್ನ, ಬಸವರಾಜು, ವಿಜಯಕುಮಾರ ಎಂದು ಹೇಳಿದ್ದು, ಅವರೆಲ್ಲ ಎಕಲವ್ಯ ನಗರ, ಮೈಸೂರು ಎಂದು ಹೇಳಿದ್ದು, ಅವರು ಕೃತ್ಯ ಎಸಗಿರುವ ಬಗ್ಗೆ ಒಪ್ಪಿಕೊಂಡಿದ್ದು ಸ್ಥಳದಲ್ಲಿ ಚಾಸಾ 4 ಮತ್ತು 5 ರವರನ್ನು ಕರೆಸಿ ಅಲ್ಲಿ ಸ್ಥಳ ಪಂಚನಾಮೆ ಮಾಡಿ, ಸ್ಥಳದಿಂದ 5 ಚಿಕ್ಕ ಗ್ಯಾಸ್ ಸಿಲೆಂಡರ್, ಆಕ್ಸಿಜನ್ಷ ಸಿಲೆಂಡರ್, ನೀಲಿ ಬಣ್ಣದ ಕಟರ್, ಸ್ಕೂ ಡ್ರೈವರ್, ಒಂದು ಗ್ಯಾಸ್ ಕಟರ್, ಕಬ್ಬಿಣದ ರಾಡು, 2 ಮಚ್ಚುಗಳು, ಒಂದು ಕಬ್ಬಿಣದ ಹಾರೆ, ಎಕ್ಸಲ್ ಬ್ಲೇಡ್, ಗ್ಯಾಸ್ ಪೈಪ್, ಕಬ್ಬಿಣದ ರಾಡು ಇವುಗಳನ್ನು ಮಹಜರ್ ಅಡಿಯಲ್ಲಿ ಚಾಸಾ 14 ರವರು ಜಪ್ತುಪಡಿಸಿಕೊಂಡಿದ್ದು, ಸ್ಥಳದಲ್ಲಿದ್ದ ಒಂದು ಟ್ರಂಕ್ ನ್ನು ಪರಿಶೀಲಿಸಲಾಗಿ ನಗದು ಹಣ ರೂಪಾಯಿ ಮೂರು ಲಕ್ಷದ ಎಂಬತ್ತೊಂಬತ್ತು ಸಾವಿರದ ಎಂಟನೂರು ಮೂವತ್ತೇಳು,

ಮತ್ತು ನಾಣ್ಯಗಳು ಇದ್ದು, ವುಗಳ ಮೌಲ್ಯ 14,344/-, 22 ಮೊಬೈಲ್ ಗಳು, 3 ಬೈಕ್ ಗಳು, ಎರಡು ಬೆಳ್ಳಿಯ ಪದಕಗಳು, ಎರಡು ಬೆಳ್ಳಿಯ ಕಣ್ಣುಗಳು, ಎರಡು ಬೆಳ್ಳಿ ಮಾದರಿಯ ತಟ್ಟೆಗಳು, 10 ಬೆಳ್ಳಿ ಮಾದರಿಯ ತುಂಡುಗಳನ್ನು ಪಂಚನಾಮೆಅಡಿಯಲ್ಲಿ ಚಾಸಾ 14 ರವರು ಜಪ್ತುಪಡಿಸಿಕೊಂಡಿರುತ್ತಾರೆ. ನಂತರ ಆರೋಪಿ ಮತ್ತು ಮುದ್ದೆ ಮಾಲು ಸಮೇತ ಠಾಣೆಗೆ ಹಿಂದಿರುಗಿತ್ತೇವೆ. ನಾನು ಚಾಸಾ 14 ರವರಿಗೆ ಈ ಮೇಲಿನಂತೆ ಮಹಜರ್ ನ್ನು ಮಾಡಲು ಸಹಕರಿಸಿರುತ್ತೇನೆ. ಈಗ ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ. ಈಗ ನಾನು ನೋಡುತ್ತಿರುವ ಮುದ್ದೆ ಮಾಲುಗಳನ್ನು ಮೂಲ ಪ್ರಕರಣ ಸಂಖ್ಯೆ 2143/2022 ರಲ್ಲಿ ಎಂ 1 ರಿಂದ 3 ಎಂದು ಗುರುತಿಸಲಾಗಿದೆ.

ನಾನು ನೋಡುತ್ತಿರುವ ದೂರಿನ ಪ್ರತಿ ಇದ್ದು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಗುರುತಿಸಲಾಯಿತು. ನಿಪಿ 1 ರ ಮೂಲ ಪ್ರತಿಯನ್ನು ಮೂಲ ಪ್ರಕರಣ ಸಂಖ್ಯೆ 2143/2022 ರಲ್ಲಿ ಗುರುತಿಸಲಾಗಿದೆ. ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ಈಗ ನಿಪಿ 2 ಎಂದು, ಹಾಗೂ ಸ್ಥಳ ಮಹರ್ ಪ್ರತಿಯನ್ನು ಈಗ ನಿಪಿ 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ ಆರ್ ಎನ್ ವಕೀಲರಿಂದ 2 ನೇ ಆರೋಪಿ ಪರವಾಗಿ:**

ನಮ್ಮ ಠಾಣೆಯಿಂದ ಕೃತ್ಯ ಸ್ಥಳ ಸುಮಾರು ಎರಡೂವರೆ ಕಿ.ಮಿ. ಅಂತರ ಇದೆ ಎಂದರೆ ಸರಿ. ಚೌಡೇಶ್ವರಿ ದೇವಸ್ಥಾನದ ಅಕ್ಕ ಪಕ್ಕ ವಾಸದ ಮನೆಗಳಿವೆ ಎಂದರೆ ಸರಿ.

ಠಾಣೆಯಿಂದ ದೇವಸ್ಥಾನಕ್ಕೆ ಹೋಗುವ ದಾರಿ ಜನನಿಬಿಡ ಪ್ರದೇಶ ಎಂದರೆ ಸರಿ. ಚಾಸಾ 2 ಮತ್ತು 3 ರವರಿಗೆ ನೋಟಿಸು ಕೊಟ್ಟು ಕಳುಹಿಸಿರಲಿಲ್ಲ. ಎಂ ಒ 1 ಮತ್ತು 2 ವಸ್ತುಗಳು ಸಾಮಾನ್ಯವಾಗಿ ಗುಜರಿಯಲ್ಲಿ ಸಿಗುತ್ತವೆ ಎಂದರೆ ಸರಿ. ಚಾಸಾ 14 ರವರು ಜಪ್ತು ಪಡಿಸಿಕೊಂಡ ನಗದು ಹಣದ ನಗದು ನೋಟುಗಳ ಮುಖ ಬೆಲೆಗಳನ್ನು ಹಾಗೂ ನಂಬರ್ಗಳನ್ನು ಪಂಚನಾಮೆಯಲ್ಲಿ ನಮೂದಿಸಲು ತೊಂದರೆ ಇರಲಿಲ್ಲ. ಎಂ 1 ರಿಂದ 3 ಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 3 ರ ಪಂಚನಾವೆಯನ್ನು ಠಾಣೆಯಲ್ಲಿ ತಯಾರಿಸಿರುತ್ತೇನೆಂದರೆ ಸರಿಯಲ್ಲ. ಆರೋಪಿತರು ಯಾವುದೇ ಕೃತ್ಯ ಎಸಗಿಲ್ಲ ಎಂದು ಕಂಡು ಬಂದರೂ ಸಹಿತ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಚಾಸಾ 14 ಜೊತೆ ಅವರ ಸಹಾಯಕರಾಗಿ ಹೋಗಿ ಚಾಸಾ 14 ರವರು ಬಿಸಲವಾಡಿಯಲ್ಲಿ ಮುದ್ದೆ ಮಾಲುಗಳನ್ನು ಜಪ್ತುಪಡಿಸಿಕೊಂಡು ಎಂದು ಸುಳ್ಳು ಹೇಳತ್ತಿದ್ದೇನೆಂದರೆ ಸರಿಯಲ್ಲ. ಇದೇ ಮೊದಲ ಬಾರಿ ಆರೋಪಿಯನ್ನು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಸು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ,**

ಸಿಸಿ ಸಂಖ್ಯೆ: 372/2025

**ತಿ.ನರಸೀಪುರ**